4. ನಾಗನೂರು ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಶಿಗ್ಗಾಂವ ಪಟ್ಟಣದ ನಾಗರೀಕರು ತಮಗೆ ಹಾಗೂ ತಮ್ಮ ಜಾನುವಾರುಗಳಿಗೆ ತೊಂದರೆ ಉಂಟಾಗುವುದರಿಂದ ಪ್ರತಿಭಟಿಸಿರುತ್ತಾರೆ ನಾಗನೂರು ಕೆರೆಗೆ ಸಾಕಷ್ಟು ನೀರು ಬಂದರೆ ಶಿಗ್ಗಾಂವ ಮತ್ತು ಸವಣೂರು ಪಟ್ಟಣಗಳಿಗೆ ನೀರು ಸರಬರಾಜು ಮಾಡಬಹುದು.

5. ಈ ತೊಂದರೆಯನ್ನು ನಿವಾರಿಸಲು ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ಒಂದು ಸಮಗ್ರ ಯೋಜನೆಯನ್ನು 25.54 ಕೋಟಿ ರೂ.ಅಂದಾಜಿನಲ್ಲಿ ರೂಪಿಸಿದ್ದು ಪರಿಶೀಲನೆಯಲ್ಲಿದೆ.

ಇ) ನಾಗನೂರು ಕೆರೆಯನ್ನು ಮೂಲವಾಗಿಟ್ಟುಕೊಂಡಿರುವ ಯೋಜನೆಯನ್ನು ಫೆಬ್ರವರಿ 2005 ರೊಳಗೆ ಪೂರ್ಣಗೊಳಿಸಲಾಗುವುದು.

1058(1527) ಶ್ರೀ ಸಿಂಧೂರ ರಾಜಶೇಖರ್(ಶಿಗ್ಗಾಂವ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವಣೂರು ತಾಲ್ಲೂಕಿನ ವೋತಿ ತಲಾಬ ಏತ ನೀರಾವರಿ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ, ಕಾಮಗಾರಿ ಸ್ಥಗಿತಗೊಳ್ಳಲು ಕಾರಣವೇನು;

ಇ) ಗುತ್ತಿಗೆದಾರರಿಗೆ ಕೊಟ್ಟಿರುವ ಕಾಲಾವಕಾಶ ಎಷ್ಟು;

ಈ) ಸರ್ಕಾರ ಈ ಕಾಮಗಾರಿಯನ್ನು ಜೂನ 15, 2005ರ ಒಳಗೆ ಸಂಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕಾಮಗಾರಿ ಪ್ರಗತಿಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಸೆಪ್ಟೆಂಬರ್ 2005ರವರೆಗೆ ಕಾಲಾವಕಾಶ ನೀಡಲಾಗಿದೆ.

ಈ) ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

1059(1528) ಶ್ರೀ ಸಿಂಧೂರ ರಾಜಶೇಖರ(ಶಿಗ್ಗಾಂವ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವಣೂರು ಸಾರಿಗೆ ಘಟಕದ ಸ್ಥಳದ ವಿವಾದದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಶಕ್ತಿ ಮೊಕದ್ದಮೆ ದಾಖಲಿಸಿದ್ದು, ಅದು ಸಂಸ್ಥೆಯ ಪರವಾಗಿ ತೀರ್ಪು ವಿರ್ಣಯ ವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಾರಿಗೆ ಘಟಕ ಅಪೂರ್ಣವಾಗಿರುವುದರಿಂದ ಹಳೆಯ ಬಸ್‌ಗಳ ದುರಸ್ತಿ ಹಾಗೂ ಡೀಸಲ್ ಹಾಕಿಸಲಿಕ್ಕೆ 60 ಕಿ.ಮೀ., ಹಾವೇರಿಗೆ ಹೋಗಿಬರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿಲ್ಲವೆ;

ಇ) ಈ ಸಾರಿಗೆ ಘಟಕವನ್ನು ಪೂರ್ಣ ಪ್ರಮಾಣದ ಸುವ್ಯವಸ್ಥಿತವಾಗಿ ಸಂಪೂರ್ಣ ಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹಾವೇರಿ ಸಿವಿಲ್ ನ್ಯಾಯಾಲಯದಲ್ಲಿ ಹೂಡಿರುವ ಮೂಲ ದಾವೆ ಸಂಖ್ಯೆ . 6/99 ವಿಲೇವಾರಿಯಾದ ಕೂಡಲೇ ಘಟಕವನ್ನು ಪೂರ್ಣಗೊಳಿಸಲಾಗುವುದು.

1062(264) ಶ್ರೀ ವಿ.ಸೋಮಣ್ಣ(ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಬ್ಬಳ್ಳಿಯಲ್ಲಿರುವ ನೈರುತ್ಯ ರೈಲ್ವೆ ವಲಯದ ಕಛೇರಿ ಹುದ್ದೆಗಳ ನೇಮಕಾತಿಯಲ್ಲಿ ಕನ್ನಡಿಗರಿಗೆ ಹೆಚ್ಚಿನ ಅವಕಾಶ ನೀಡದೇ ಇರುವುದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ;

ಆ) ಸಲ್ಲಿಸಿದ್ದಲ್ಲಿ, ಯಾವಾಗ ಸಲ್ಲಿಸಲಾಯಿತು ಹಾಗೂ ಈ ಬಗ್ಗೆ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇಲ್ಲದಿದ್ದಲ್ಲಿ ಕೂಡಲೇ ಕೇಂದ್ರ ಸರ್ಕಾರದ ಗಮನಕ್ಕೆ ಕನ್ನಡಿಗರಿಗೆ ಉದ್ಯೋಗಾವಕಾಶ ದೊರಕದೇ ಇರುವ ಬಗ್ಗೆ ಮನವಿ ಸಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ದಕ್ಷಿಣ ಪಶ್ಚಿಮ ರೈಲ್ವೆ ವಲಯದ ನೇಮಕಾತಿಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳಿಗೆ ಶೇಕಡ 100 ರಷ್ಟು ಮತ್ತು ಉನ್ನತ ಹುದ್ದೆಗಳಿಗೆ ಶೇಕಡ 85 ರಷ್ಟು ಸ್ಥಳೀಯರನ್ನೇ ನೇಮಕಗೊಳಿಸುವಂತೆ ಕೋರಿ ಮಾನ್ಯ ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳಿಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿರುತ್ತಾರೆ.

ಆ) ದಿನಾಂಕ 11.8.2003ರಲ್ಲಿ ಮನವಿ ಸಲ್ಲಿಸಲಾಗಿದೆ. ಈ ಪತ್ರದ ಬಗ್ಗೆ ಕೇಂದ್ರ ಸರ್ಕಾರವು ಕ್ರಮ ಕೈಗೊಂಡಿರುವ ಬಗ್ಗೆ ಈವರೆಗೂ ಮಾಹಿತಿಯು ಸರ್ಕಾರಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಆದಾಗ್ಯೂ ಕೇಂದ್ರ ಸರ್ಕಾರಕ್ಕೆ ಪುನಃ ಒತ್ತಾಯಿಸಲಾಗುವುದು.

1063(275) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ).: ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರದಲ್ಲಿ ಪ್ರತಿ ದಿನ ಸಂಗ್ರಹಿಸುತ್ತಿರುವ ಸರಾಸರಿ ಕಸದ ಪ್ರಮಾಣವೆಷ್ಟು;

ಆ) ಈ ಕಸವನ್ನು ವಿಲೇವಾರಿ ಮಾಡಲು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ 100 ವಾರ್ಡ್‌ಗಳ ವಿವಿಧ ಪ್ರದೇಶಗಳಲ್ಲಿ ಪ್ರತಿ ದಿನ ಸುಮಾರು 2000 ಟನ್‌ಗಳಷ್ಟು ತ್ಯಾಜ್ಯ ವಸ್ತುಗಳು ಸಂಗ್ರಹವಾಗುತ್ತಿವೆ .